**ಶ್ರೀ ಚತುರ್ದಶಿ ಗ್ರಂಥ**

**ಅರ್ಥಾನುಸಂಧಾನ**

**ಜೀವ ಹೋಮ ಪ್ರಕರಣ**

(ಯಜ್ಞದ ಸಾಮಗ್ರಿ - ಸಮಿತ್ತು-ಧೂಮ-ಅರ್ಚಿ-ಅಂಗಾರ-ವಿಸ್ಫುಲಿಂಗ)

**ನಾರಾಯಣ - ಪ್ರಥಮಾಗ್ನಿ**

"ಎಲ್ಲವನ್ನೂ ಸ್ವೀಕಾರ ಮಾಡುವವ ಮತ್ತು ಅಂಗಗಳಿಗೆಲ್ಲಾ ಒಡೆಯನಾಗಿದ್ದಾನೆ" ಆದ್ದರಿಂದ ಅಗ್ನಿ ಎನಿಸಿದ್ದಾನೆ.

**ವ್ಯಾಪ್ತಿ -** ಆದಿತ್ಯ ಮಂಡಲ

**ವ್ಯಾಪಾರ -** ಪ್ರಾಣಿಗಳಿಂದ ಮಾದಲ್ಪಟ್ಟ ಕರ್ಮ ಸಮೂಹವನ್ನು ತೆಗೆದುಕೊಂಡು ಹೋಗುವುದರಿಂದ ಆದಿತ್ಯನಾಮಕನು

**ನಾರಯಣ-ನಾರಾಯಣ-ಸಮಿತ್ತು**

**ವ್ಯಾಪ್ತಿ -** ಆದಿತ್ಯ ಮಂಡಲ

**ವ್ಯಾಪಾರ -** "ಸಮೇಧನಾತ್" - ಅಗ್ನಿವೃದ್ಧಿಗೆ ಹಾಗೂ ಮೇಧಾಶಕ್ತಿಗೆ ಕಾರಣನಾಗಿದ್ದಾನೆ - ಆತನನ್ನು ಈ ರೀತಿ ನೆನೆದವರಿಗೂ ಮೇಧಾ ಶಕ್ತಿ ವೃದ್ಧಿಪಡಿಸುತ್ತಾನೆ

ನಾರಾಯಣ - ನಾರಾಯಣನ ಈ ರೂಪಕ್ಕೆ ನಮೋನಮ:

**ನಾರಾಯಣ - ವಾಸುದೇವ - "ಧೂಮ"**

**ವ್ಯಾಪ್ತಿ -** ರಶ್ಮಿಯಲ್ಲಿರುತ್ತಾನೆ - ರಶ್ಮಿನಾಮಕನು, ರತಿರೂಪ -

**ಸುಖರೂಪ -** ಕ್ರೀಡಾರೂಪನು "ರತಿ ಶಂ ಮಾನ ರೂಪತ್ವಾತ್"

**ವ್ಯಾಪಾರ -** "ಧೂತ್ಕರಣಾತ್' - ಅಜ್ಞಾನಾದಿಗಳನ್ನು ಶತ್ರುಗಳನ್ನು ನಿರಾಕರಣ ಮಾಡುತ್ತಾನೆ . ಈ ರೀತಿ ನೆನೆದವರ ಅಜ್ಞಾನಾದಿಗಳನ್ನೂ ಮತ್ತು ಶತೃಗಳನ್ನು ನಿರಾಕರಣ ಮಾಡುತ್ತಾನೆ.

ಈ ಭಗವಂತನ ನಾರಾಯಣ - ವಾಸುದೇವ ರೂಪಗಳಿಗೆ ನಮೋನಮ:

**ನಾರಾಯಣ - ಸಂಕರ್ಷಣ - ಅರ್ಚಿ (ಜ್ವಾಲೆ)**

ಅರಂಚಿತತ್ವಾತ್:ಅರ್ಚಿನಾಮಕನು

**ವ್ಯಾಪ್ತಿ -** ಅಹಸ್ಸಿನಲ್ಲಿ ( ಹಗಲಿನಲ್ಲಿ)

**ವ್ಯಾಪಾರ -** "ತಮಸಾ ಅಹನನೀಯತ್ವಾತ್" ತಮಸ್ಸನ್ನು - ಅಜ್ಞಾನವನ್ನು ಪರಿಹಾರ ಮಾಡುತ್ತಾನಾದ್ದರಿಂದ ಅಹರ್ನಾಮಕನು .

ಈ ರೀತಿ ನೆನೆದವರ ಅಜ್ಞಾನವನ್ನು ಪರಿಹಾರ ಮಾಡುತ್ತಾನೆ. ಆ ಭಗವದ್ರೂಪಗಳಿಗೆ ನಮೋನಮಃ

**ನಾರಾಯಣ - ಪ್ರದ್ಯುಮ್ನ - ಅಂಗಾರ "ಆಹ್ಲಾದ ರೂಪತ್ವಾತ್"**

**ವ್ಯಾಪ್ತಿ -** ಚಂದ್ರನಲ್ಲಿ - ಚಂದ್ರನಾಮಕನು

**ವ್ಯಾಪಾರ -** "ಅಂಗರತೇಃ" - ಅಂಗಾಂಗಗಳಲ್ಲಿ ಕ್ರೀಡಿಸುತ್ತಾನೆ. ಚಿಂತನೆ ಮಾಡಿದವರಿಗೂ ಆಹ್ಲಾದವನ್ನು ಕೊಡುತ್ತಾನೆ. ಆ ಭಗವದ್ರೂಪಕ್ಕೆ ನಮೋನಮಃ

**ನಾರಾಯಣ - ಅನಿರುದ್ಧ - ವಿಸ್ಫುಲಿಂಗ (ಕಿಡಿ)**

**ವ್ಯಾಪ್ತಿ -** ನಕ್ಷತ್ರದಲ್ಲಿ - ನಕ್ಷತ್ರ - ನಕ್ಷತ್ರನಾಮಕನು

"ನವಿದ್ಯತೆ ಕ್ಷತ್ರಂ ಪಾಲಕೋಯಸ್ಯೇತಿ" - ಇವನೇ ಎಲ್ಲರಿಗೂ ರಕ್ಷಕ - ಅನ್ಯರಕ್ಷರಹಿತ

**ವ್ಯಾಪಾರ -** "ವಿವಿಧಂ ಸ್ಫುರಣಾತ್"

ಮತ್ಸ್ಯಾದಿ ರೂಪಗಳಿಂದ ವಿಧವಿಧ ಪ್ರಾದುರ್ಭಾವ ಹೊಂದುವನು - ಚಿಂತನೆ ಮಾಡಿದವರಿಗೆ ನಾನಾರೀತಿ ತೋರುತ್ತಾನೆ - ಆ ಭಗವದ್ರೂಪಗಳಿಗೆ ನಮೋನಮಃ

ದೇವತೆಗಳು ಈ ರೀತಿ ಜೀವನನ್ನ ನಾರಾಯಣಾದಿ ಪಂಚ ರೂಪಾತ್ಮಕ - ಸಮಿತ್ತು ಮೊದಲಾದ ಪಂಚರೂಪಗಳಲ್ಲಿ ನಾರಾಯಣನೆಂಬ ಪ್ರಥಮಾಗ್ನಿಯಲ್ಲಿ ಹೋಮ ಮಾಡಿ ಚಂದ್ರನ ಮೂಲಕ ಬಂದು ಪರ್ಜನ್ಯಾಗ್ನಿಯಲ್ಲಿ ಹೋಮ

**ವಾಸುದೇವ - ಪರ್ಜನ್ಯನಾಮಕ** , ಪರ್ಜನ್ಯ - ಬ್ರಹ್ಮಾದಿಗಳಿಗೆ ಇವನಿಂದ ಹುಟ್ಟಿದೆ.

**ವಾಸುದೇವ - ನಾರಾಯಣ - ವಾಯುನಾಮಕ ಸಮಿತ್ತು**

"ಜ್ಞಾನಾಯ ರೂಪತ್ವಾತ್"

**ವ್ಯಾಪ್ತಿ** - ವಾಯು

**ವ್ಯಾಪಾರ** - ಜ್ಞಾನ ಮತ್ತು ಆಯು: ಪದರೂಪಿ ಚಿಂತನೆ ಮಾಡಿದವರಿಗೂ ಜ್ಞಾನ ಮತ್ತು ಆಯು: ಪ್ರದನಾಗಿದ್ದನೆ - ಆ ಭಗವದ್ರೂಪಗಳಿಗೆ ನಮೋನಮ:

**ಅಭ್ರನಾಮಕ - ವಾಸುದೇವ - ವಾಸುದೇವ - ಧೂಮ**

"ಅಪಾಂಭರಣಾತ್" - ನೀರನ್ನ ತುಂಬಿಕೊಂಡಿರಿವಂತಹವನು

**ವ್ಯಾಪ್ತಿ** - ಮೇಘ

**ವ್ಯಾಪಾರ -** ಧೂಮನಾಗಿ – ಅಜ್ಞಾನ ನಾಶಮಾಡುತ್ತಾನೆ. ಆ ಭಗವದ್ರೂಪಕ್ಕೆ ನಮೋನಮಃ

**ವಿದ್ಯುನಾಮಕ - ವಾಸುದೇವ - ಸಂಕರ್ಷಣ - ಅರ್ಚಿ (ಜ್ವಾಲೆ)**
**ವ್ಯಾಪ್ತಿ -** ವಿದ್ಯುತ್ತಿನಲ್ಲಿ (ಮಿಂಚು)
**ವ್ಯಾಪಾರ -** ಎಲ್ಲವನ್ನು ತೋರಿಕೊಡುತ್ತಾನೆ
ವಾಸುದೇವ – ಸಂಕರ್ಷಣ ರೂಪಗಳಿಗೆ ನಮೋನಮಃ

**ಅಶನಿನಾಮಕ ವಾಸುದೇವ - ಪ್ರದ್ಯುಮ್ನ - ಅಂಗಾರ**
**ವ್ಯಾಪ್ತಿ -** ಸಿಡಿಲು
**ವ್ಯಾಪಾರ -** "ಅಶನಾತ್ " – ಸರ್ವ ಭಕ್ಷಕನಾಗಿದ್ದಾನೆ. ( ನಮ್ಮ ಪಾಪಗಳನ್ನೆಲ್ಲಾ ಭಕ್ಷಿಸಿಬಿಡುತ್ತಾನೆ) ವಾಸುದೇವ – ಪ್ರದ್ಯುಮ್ನ ರೂಪಗಳಿಗೆ ನಮೋನಮಃ

**ಹ್ರಾದುನಿನಾಮಕ - ವಾಸುದೇವ - ಅನಿರುದ್ಧ - ವಿಸ್ಫುಲಿಂಗ (ಕಿಡಿ)**
**ವ್ಯಾಪ್ತಿ -** ಮೇಘ (ನಮ್ಮ ಶತ್ರುಗಳನ್ನ ಗರ್ಜಿಸಿ ಓಡಿಸುತ್ತಾನೆ)
**ವ್ಯಾಪಾರ -** "ನಿಹ್ರಾ್ರದನಾತ್" ಗರ್ಜನೆ ಮಾಡುವವನು
ವಾಸುದೇವ – ಅನಿರುದ್ಧ ಭಗವದ್ರೂಪಗಳಿಗೆ ನಮೋನಮಃ

ಈ ರೀತಿ ವಾಸುದೇವನಾಮಕ ಎರಡನೇ ಅಗ್ನಿಯಲ್ಲಿ ಹೋಮಿಸಿ ಅನಂತರ ವೃಷ್ಠಿದ್ವಾರ ಮೂರನೇ ಅಗ್ನಿಯಲ್ಲಿ ಹೋಮಿಸುತ್ತಾರೆ

**ವೃಷ್ಠಿದ್ವಾರ ೩ನೇ ಅಗ್ನಿ - ಪೃಥ್ವಿ - ಸಂಕರ್ಷಣ**

"ಪ್ರಥನಾತ್" - ವಿಸ್ತಾರವಾಗಿ ವ್ಯಾಪಿಸಿದ್ದಾನೆ - ಸಂವತ್ಸರ ನಾಮಕ - ಸಂಕರ್ಷಣ - ನಾರಾಯಣ - ಸಮಿತ್ತು

**ವ್ಯಾಪ್ತಿ** - ಸಂವತ್ಸರದಲ್ಲಿ

**ವ್ಯಾಪಾರ** - "ಸಮ್ಯಗ್ವಾಸಯತೀತಿ" - ಚೆನ್ನಾಗಿ ಬದುಕುವಂತೆ ಮಾಡುತ್ತಾನೆ. ಭಕ್ತರನ್ನ ಕ್ರೀಡಾದಿಗಳಿಂದ ಸಂತೋಷಪಡಿಸುತ್ತಾನೆ. ಈ ಭಗವದ್ರೂಪಗಳಿಗೆ ನಮೋನಮ:

**ಆಕಾಶನಾಮಕ - ಸಂಕರ್ಷಣ - ವಾಸುದೇವ - ಧೂಮ**

**ವ್ಯಾಪ್ತಿ** - ಆಕಾಶದಲ್ಲಿ

**ವ್ಯಾಪಾರ** - "ಪ್ರಕಾಶನಾತ್" - ಎಲ್ಲರನ್ನೂ ಪ್ರಕಾಶಗೊಳಿಸುತ್ತಾನೆ. ಈ ಭಗವದ್ರೂಪಕ್ಕೆ ನಮೋನಮ:

**ರಾತ್ರಿನಾಮಕ - ಸಂಕರ್ಷಣ - ಸಂಕರ್ಷಣ - ಅರ್ಚಿ**

**ವ್ಯಾಪ್ತಿ** - ರಾತ್ರಿಯಲ್ಲಿ

**ವ್ಯಾಪಾರ** - "ರತಿದಾನಾತ್" - ಸುಖ ಕೊಡುವುದರಿಂದ ರಾತ್ರಿ ಎಂದು ಹೆಸರು. ಈ ಭಗವದ್ರೂಪಗಳಿಗೆ ನಮೋನಮಃ

**ದಿಙ್ ನಾಮಕ - ಸಂಕರ್ಷಣ - ಪ್ರದ್ಯುಮ್ನ - ಅಂಗಾರ**

**ವ್ಯಾಪ್ತಿ** - ದಿಕ್ಕುಗಳಲ್ಲಿ

**ವ್ಯಾಪಾರ** - "ಮೋಕ್ಷಾದಿಕಂ ಮುಖ್ಯ ಪುರುಶಾರ್ಥಾನ್ ದಿಶತೀತಿ" - ಮೋಕ್ಷವನ್ನು ಕೋಡುತ್ತಾನಾದ್ದರಿಂದ

**ಅವಾಂತರ ದಿಙ್ನಾಮಕ - ಸಂಕರ್ಷಣ - ಅನಿರುದ್ಧ - ವಿಸ್ಫುಲಿಂಗ(ಕಿಡಿ)**

**ವ್ಯಾಪ್ತಿ** - ಅವಾಂತರ ದಿಕ್ಕುಗಳಲ್ಲಿ

**ವ್ಯಾಪಾರ** - ಅಪರ ತತ್ವಗಳನ್ನು ಉಪದೇಶಿಸುತ್ತಾನೆ "ಸ್ವರ್ಗಾದಿಕಂ ಅವಾಂತರಂ ದಿಶತೀತಿ". ಈ ರೀತಿ ಸಂಕರ್ಷಣನೆಂಬ ಮೂರನೆ ಅಗ್ನಿಯಲ್ಲಿ ಹೋಮಿಸಿ ಅನ್ನದ್ವಾರ ನಾಲ್ಕನೆ ಅಗ್ನಿಯಲ್ಲಿ ಹೋಮ. ಅನ್ನದ ಮೂಲಕ ಪುರುಷನೆಂಬ ಪ್ರದ್ಯುಮ್ನಾಗ್ನಿಯಲ್ಲಿ ಹೋಮ.

**ಪುರುಷನಾಮಕ ಪ್ರದ್ಯುಮ್ನ (ತಂದೆ)**

"ಪುರುತ್ವಾತ್ - ಪೂರ್ಣತ್ವಾತ್"

ವಾಙ್ ನಾಮಕ - ಪ್ರದ್ಯುಮ್ನ - ನಾರಾಯಣ - ಸಮಿತ್ತು

**ವ್ಯಾಪ್ತಿ** - ವಾಕ್ಕಿನಲ್ಲಿರುವವ

**ವ್ಯಾಪಾರ** - ಮಾತನಾಡುವವನು

**ಪ್ರಾಣನಾಮಕ - ಪ್ರದ್ಯುಮ್ನ - ವಾಸುದೇವ - ಧೂಮ**

**ವ್ಯಾಪ್ತಿ** - ಪ್ರಾಣನಲ್ಲಿ

**ವ್ಯಾಪಾರ** - ಚೇಷ್ಟೆ ಮಾಡಿಸುತ್ತಾನೆ. "ಸಂಕರ್ಷಣಾತ್" – ಪ್ರಾಣಗಳನ್ನು ಹಿಡಿದು ನಿಲ್ಲಿಸುವದರಿಂದ

**ಜಿಹ್ವಾನಾಮಕ - ಪ್ರದ್ಯುಮ್ನ- ಸಂಕರ್ಷಣ - ಅರ್ಚಿ (ಜ್ವಾಲೆ)**

**ವ್ಯಾಪ್ತಿ** - ಜಿಹ್ವಾ

**ವ್ಯಾಪಾರ** - ಎಲ್ಲವೂ ಇವನೊಳಗೆ ಹೋಮ ಮಾಡಲ್ಪಡುತ್ತೆ "ಹೂಯತೇ ಅಸ್ಮಿನ್ ಇತಿ"

**ಚಕ್ಷುರ್ನಾಮಕ - ಪ್ರದ್ಯುಮ್ನ - ಪ್ರದ್ಯುಮ್ನ - ಅಂಗಾರ**

**ವ್ಯಾಪ್ತಿ** - ಚಕ್ಷುಸ್

**ವ್ಯಾಪಾರ** - ತಾನು ನೋಡಿ ನಮಗೆ ನೋಡಿಸುವುದರಿಂದ " ದರ್ಶನಾತ್"

**ಶ್ರೋತ್ರನಾಮಕ - ಪ್ರದ್ಯುಮ್ನ - ಅನಿರುದ್ಧ - ವಿಸ್ಫುಲಿಂಗ**

**ವ್ಯಾಪ್ತಿ -** ಶ್ರೋತ್ರ

**ವ್ಯಾಪಾರ -** ತಾನು ಕೇಳಿ ನಮಗೆ ಕೇಳಿಸುವುದರಿಂದ " ಶ್ರವಣಾತ್".

ಈ ರೀತಿ ಪ್ರದ್ಯುಮ್ನನೆಂಬ ನಾಲ್ಕನೇ ಅಗ್ನಿಯಲ್ಲಿ ಹೋಮಿಸಿ -

ರೇತೋದ್ವಾರಾ ಪಂಚಮಾಗ್ನಿಯಲ್ಲಿ ಹೋಮ

**ಯೋಶಾನಾಮಕ - ಅನಿರುದ್ಧನೇ - ಅಗ್ನಿ (ತಾಯಿ)**

"ಜ್ಯೋಷ್ಯತ್ವಾತ್", ಭೋಗ್ಯತ್ವಾತ್ " - ಸೇವಿಸಲ್ಪಡಲು ಯೋಗ್ಯ ಮತ್ತು ಭೋಗಯೋಗ್ಯ

ಯೋಶಾ - ಸಂತೋಷಕೊಡುತ್ತಾನಾದ್ದರಿಂದ.

**ಉಪಸ್ಥನಾಮಕ - ಅನಿರುದ್ಧ - ನಾರಾಯಣ - ಸಮಿತ್ತು**

**ವ್ಯಾಪ್ತಿ -** ಉಪಸ್ಥ - ನಮ್ಮ ಹತ್ತಿರ ಇರುವುದರಿಂದ

**ವ್ಯಾಪಾರ -** ಉಪಸ್ಥದಲ್ಲಿರುವ (ಗುಹ್ಯೇಂದ್ರಿಯಗತ) " ಉಪಸಮೀಪೇ ಸ್ಥಿತತ್ವಾತ್"

**ಉಪಮಂತ್ರಣನಾಮಕ - ಅನಿರುದ್ಧ - ವಾಸುದೇವ - ಧೂಮವು**

**ವ್ಯಾಪ್ತಿ -** ಉಪಮಂತ್ರ

**ವ್ಯಾಪಾರ** - ಆಯಾ ಕಾಲದ ಮಾತುಗಳನ್ನು ಹೊರಡಿಸುವುದರಿಂದ " ಉಪಮಂತ್ರಣ ಕರ್ತೃತ್ವಾತ್"

**ಯೋನಿನಾಮಕ - ಅನಿರುದ್ಧ - ಸಂಕರ್ಷಣ - ಅರ್ಚಿ**

**ವ್ಯಾಪ್ತಿ** - ಯೋನಿ

**ವ್ಯಾಪಾರ** - ನಮನ್ನು ಆನಂದದಿಂದ ಮಿಶ್ರಮಾಡುತ್ತಾನೆ. "ಯುನಕ್ತಿ ಮಿಶ್ರೀ ಕರೋತಿ" – ಶ್ಲುಕ್ಲ ಶೋಣಿತವೆರಡನ್ನು ಮಿಶ್ರಣ ಮಾಡುತ್ತಾನೆ

**ಅಂತ:ಕರಣ ನಾಮಕ - ಅನಿರುದ್ಧ - ಪ್ರದ್ಯುಮ್ನ - ಅಂಗಾರ**

**ವ್ಯಾಪ್ತಿ** - ಅಂತ:ಕರಣ

**ವ್ಯಾಪಾರ** - ಒಳಗೆ ನಡೆಯುವ ಕ್ರಿಯಗೆ ಕರ್ತೃ " ಯೋನ್ಯಂತ: ಕ್ರಿಯಮಾಣ ವ್ಯಾಪಾರ ಕರ್ತೃತ್ವಾತ್"

**ಅಭಿನಂದನ ನಾಮಕ - ಅನಿರುದ್ಧ - ಅನಿರುದ್ಧ - ವಿಸ್ಫುಲಿಂಗ (ಕಿಡಿ)**

**ವ್ಯಾಪ್ತಿ** - ಅಭಿನಂದನದಲ್ಲಿ

**ವ್ಯಾಪಾರ** - ಚೆನ್ನಾಗಿ ನಮ್ಮನ್ನು ಸಂತೋಷಗೊಳಿಸುತ್ತಾನೆ " ಅಭಿನಂದಯತೀತಿ"

ಈ ರೀತಿ ಕ್ರಮವಾಗಿ ಪಂಚಾಗ್ನಿಯಲ್ಲಿ ಹೋಮಾನಂತರದಲ್ಲಿ ಜೀವನಿಗೆ ಪುರುಷಭ್ಧಿತವಾದ ದೇಹವು ಬರುತ್ತದೆ.

## ಅನುಸಂಧಾನ

ಐದು ಅಗ್ನಿಯಲ್ಲಿ ಹೋಮ ಮಾಡಿದ ಮೇಲೆ ದೇಹಪ್ರಾಪ್ತಿ - ಆಯಾ ಅಗ್ನಿಗಳಲ್ಲಿ ದೇವತೆಗಳ ಮೂಲಕ ನನ್ನನೇ ಹೋಮಮಾಡುವಾಗ ಪ್ರಕಟವಾದ ನಿನ್ನ ಅನೇಕ ರೂಪಗಳು - ಹೋಮ ಪದಾರ್ಥವಾದ ನಿನ್ನ ಅನೇಕ ರೂಪಗಳು - ಹೋಮ ಪದಾರ್ಥವಾದ ನನ್ನಲ್ಲಿ ದೇವತೆಗಳ ಮಂತ್ರಗಳಲ್ಲಿ - ಕ್ರಿಯೆಗಳಲ್ಲಿ - ಅನುಸಂಧಾನಗಳಲ್ಲಿ ಪ್ರಕಟವಾದ ನಿನ್ನ ಅದ್ಭುತ - ಅಪೂರ್ವ - ಅನಂತ ರೂಪಗಳು - ಬಂದ ಮೂರುತಿ ನಿನಗೆ ಅರ್ಪಿತ - ಅದೆಲ್ಲಾ ನಿನ್ನ ಪೂಜೆಯಾಗಲಿ ಹರಿಯೇ. ಈ ಜನ್ಮದಲ್ಲಿ ಕಳೆದ ದಿನಗಳಲ್ಲಿ - ಹಾಗೂ ಹಿಂದೆ ಕಳೆದ ಎಲ್ಲಾ ಜನ್ಮಗಳಲ್ಲಿ ಹಾಗೂ ಮುಂದೆ ಕಳೆಯುವ ಎಲ್ಲಾ ಜನ್ಮಗಳಲ್ಲಿ ನಮಗೆ ದೇಹ ಕೊಡಲಿಕ್ಕೆ ನೀನು ಅಲ್ಲಲ್ಲಿ ಪ್ರಕಟ ಮಾಡಿದ ನಿನ್ನ ರೂಪಗಳು ಯಜ್ಞತ್ವೇನ ನಿನಗೆ ಅರ್ಪಿತವಾಗಲಿ ಹರಿಯೇ. ನನ್ನ ಸುತ್ತಲೂ ಇರುವ ಅರ್ಪಣೆ ಮಾಡಿಕೊಳ್ಳದ - ಕ್ರಮ ಗೊತ್ತಿಲ್ಲದ ಸಕಲ ಮುಕ್ತಿಯೋಗ್ಯರಾದ ಜೀವರಲ್ಲಿ ನೀನು ನಡೆಸಿದ ಈ ಯಜ್ಞದಲ್ಲಿ ಪ್ರಕಟವಾದ ನಿನ್ನ ರೂಪಗಳು ಯಜ್ಞತ್ವೇನ ನಿನಗೆ ಅರ್ಪಿತ ಹರಿಯೇ

# ಉಪನಯನ ಪ್ರಕರಣ

೧. ಗಾಯತ್ರಿಮಂತ್ರದೊಳಗಿರುವ "ಗಾಯತ್ರಿ" ನಾಮಕನಾದ ಅನಂತ ಸೂರ್ಯಪ್ರಭಾವನಾದ ಸ್ತ್ರೀರೂಪಿ ಹಯಗ್ರೀವ - ನಿನಗೆ ನಮೋನಮ:

೨. "ಭೂತ"" - ಪೂರ್ಣನಾದುದರಿಂದ ಎಲ್ಲಾ ಚೇತನ ಮತ್ತು ಅಚೇತನಗಳಲ್ಲಿ ಒಳಗೆ ನಿಂತು ನಿಯಾಮನ ಮಾಡುವ ಪೂರ್ಣನಾದ್ದರಿಂದ "ಭೂತ" ಎಂದು ಕರೆಸಿಕೊಳುತ್ತಾನೆ - ನಿನಗೆ ನಮೋನಮ:

೩. ಎಲ್ಲರ ನಾಲಿಗೆಯಲ್ಲಿ ನಿಂತು "ವಾಕ್" ಎಂಬ ಹೆಸರಿನಿಂದಿರುವ ಸ್ತ್ರೀರೂಪಿ ಹಯಗ್ರೀವ - ಹೇ ಭಗವಂತ ನಿನಗೆ ನಮೋ ನಮ:

೪. ಭೂಮಿಯೊಳಗೆ "ಪೃಥಿವಿ" ಎಂದು ಕರೆಸಿಕೊಂಡ ಸ್ತ್ರೀ ರೂಪಿ ಹಯಗ್ರೀವ - ಹಳದಿ ಬಣ್ಣದವ - ನಿನಗೆ ನಮೋನಮ:

೫. ಸಮಸ್ತ ಪದಾರ್ಥಗಳಿಗೆ ಆಧಾರವಾದ ಜೀವನ ಸುತ್ತೂ ವ್ಯಾಪಿಸಿರುವಂತೆ "ಶರೀರ" ಎಂದು ಕರೆಸಿಕೊಳ್ಳುವ ವಿರಾಟ್ ರೂಪಿ - ನಿನಗೆ ನಮೋ ನಮಃ

೬. ಎಲ್ಲಾ ಇಂದ್ರಿಯಗಳಲ್ಲಿ - ೫ ಪ್ರಾಣಗಳಲ್ಲಿ ಆಧಾರವಾದ " ಹೃದಯ" ಎಂದು ಕರೆಸಿಕೊಂಡ ಜೀವರ ಹೃದಯದೊಳಗಿರುವ ರೂಪ - "ಹೃದಯ" - ನಿನಗೆ ನಮೋ ನಮಃ

## ಅನುಸಂಧಾನ

ಜಗತ್ತಿಗೆ ಯಾವನು ಹುಟ್ಟುವುದರ ಮೂಲಕ "ಸವಿತಾ" ಅಂದು ಕರೆಸಿಕೊಂಡಿದ್ದಾನೋ - ಕ್ರೀಡಾದಿ ಗುಣಗಳನ್ನು ಹೊಂದಿದ್ದರಿಂದ ದೇವ ಎಂದು ಕರೆಸಿಕೊಂಡಿದ್ದಾನೆ - ಯಾವನು ನಮ್ಮನ್ನು ಮೋಕ್ಷದ ಕಡೆಗೆ ಹೊತ್ತುಕೊಂಡು - ಕರೆದುಕೊಂಡು ಹೋಗುತ್ತಾ "ಭರ್ಗ" ಎಂದು ಕರೆಸಿಕೊಳ್ಳುತ್ತಾನೋ ಅಂಥ ಸೂರ್ಯ ಮಂಡಲ ಮಧ್ಯವರ್ತಿಯಾದ ನಾರಾಯಣನ ಶ್ರೇಷ್ಠವಾದ - ಸರ್ವತ್ರವ್ಯಾಪ್ತನಾದ ಚಿಂತನೆ ಮಾಡಲೇ ಬೇಕಾದ ನಮ್ಮ ಬುದ್ಧಿಯನ್ನು ಅವನ ಕಡೆಗೇ ಪ್ರೇರಣೆ ಮಾಡುವಂತಹ ಅದ್ಭುತ ರೂಪವನ್ನು ಚಿಂತನೆ ಮಾಡುವೆವು

ಹಾಗೆ ಲ ದಿಕ್ಕುಗಳ ದೇವತಗಳಲ್ಲಿ ಪ್ರಾರ್ಥನೆ :

ನಿಮ್ಮನಿಮ್ಮ ದಿಕ್ಕುಗಳಿಗೆ ಬಂದಾಗ ನಮ್ಮನ್ನು ದೇವರ ಚಿಂತನೆ ಹಾಳಾಗದಂತೆ ಕಾಪಾಡಿ. ನಿಮಗೆ ನಾಮೊನಮ: